# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 720 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್ ಗೋಪಿನಾಥ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12.03.2025 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

*******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪೆರಿಫೆರಲ್-2 ವರ್ತುಲ ರಸ್ತೆ ಪ್ರಾರಂಭವಾಗಿದ್ದು ಯಾವಾಗ ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ; (ವಿವರ ನೀಡುವುದು) | • ಬೆಂಗಳೂರು ಪೆರಿಫೆರಲ್ ರಿಂಗ್ ರಸ್ತೆ ಭಾಗ-2 ರ ಯೋಜನೆಯಲ್ಲಿ ಹೊಸೂರು ರಸ್ತೆ - ಕನಕಪುರ ರಸ್ತೆ - ಮೈಸೂರು ರಸ್ತೆ - ಮಾಗಡಿ ರಸ್ತೆ - ತುಮಕೂರು ರಸ್ತೆ ಮಾರ್ಗಗಳನ್ನೊಳಗೊಂಡಂತೆ 51.57 ಕಿ.ಮೀ ಉದ್ದದ ರಸ್ತೆ ಯೋಜನೆಯು 2005-06ನೇ ಸಾಲಿನಲ್ಲಿ ಪ್ರಾರಂಭವಾಗಿದೆ.<br><br>• ಪೆರಿಫೆರಲ್ ವರ್ತುಲ ರಸ್ತೆಯ ಭಾಗವಾದ ಮೈಸೂರು ರಸ್ತೆ- ಮಾಗಡಿ ರಸ್ತೆ ಸಂಪರ್ಕಿಸುವ ರಸ್ತೆ ಕಾಮಗಾರಿ (10.77 ಕಿ.ಮೀ ಉದ್ದ)ಗಾಗಿ ಅವಶ್ಯವಾದ 321 ಎಕರೆ 10 ಗುಂಟೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳಲು ದಿನಾಂಕ:27.07.2011 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಭಾಗದ ರಸ್ತೆ ಕಾಮಗಾರಿಯು ಬಹುತೇಕ ಮುಕ್ತಾಯ ಹಂತದಲ್ಲಿರುತ್ತದೆ.<br><br>• ಈ ಯೋಜನೆಯ ಉಳಿದ ಭಾಗಗಳಾದ ಹೊಸೂರು ರಸ್ತೆ - ಬನ್ನೇರುಘಟ್ಟ ರಸ್ತೆ-ಕನಕಪುರ ರಸ್ತೆ–ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆಯಿಂದ ತುಮಕೂರು ರಸ್ತೆ ನಡುವಿನ ಪ್ರದೇಶಗಳಲ್ಲಿ ಅವಶ್ಯವಿರುವ ಭೂ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |
| ಆ | ಪೆರಿಫೆರಲ್-2 ವರ್ತುಲ ರಸ್ತೆಯ ಉಪಯೋಗಕ್ಕೆ ರೈತರಿಂದ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ವಶಪಡಿಸಿಕೊಳ್ಳಲಾಗಿದೆ; | • ಪೆರಿಫೆರಲ್ ರಿಂಗ್ ರಸ್ತೆ-2 ಯೋಜನೆಯಡಿ ಒಳಪಡುವ ಜಮೀನುಗಳ ಭೂಸ್ವಾಧೀನಕ್ಕಾಗಿ ದಿನಾಂಕ:12.12.2005 ಮತ್ತು ದಿನಾಂಕ:15.11.2006ರಂದು ಕ್ರಮವಾಗಿ 1862 ಎಕರೆ 10 ಗುಂಟೆ ಮತ್ತು 854 ಎಕರೆಗಳಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br><br>• ಮಾಗಡಿ ರಸ್ತೆಯಿಂದ ಮೈಸೂರು ರಸ್ತೆವರೆಗಿನ ಫೆರಿಫೆರಲ್ ವರ್ತುಲ ರಸ್ತೆಗೆ ಅವಶ್ಯಕವಾದ 321ಎಕರೆ 10ಗುಂಟೆ ಜಮೀನಿನ ಭೂಸ್ವಾಧೀನಕ್ಕೆ ದಿನಾಂಕ:27.07.2011 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. |
| ಇ | ರೈತರ ಜಮೀನನ್ನು ವಶಪಡಿಸಿಕೊಳ್ಳಲು ಇರುವ ಮಾನದಂಡಗಳೇನು; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳಿಗೆ ಅವಶ್ಯವಿರುವ ಜಮೀನುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ ಕಲಂ 17, 35 ಮತ್ತು 36ರನ್ವಯ ಹಾಗೂ ಭೂಸ್ವಾಧೀನ ಅಧಿನಿಯಮ, 1894ರ ಉಪಬಂಧಗಳಿಗನುಗುಣವಾಗಿ ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. |

| | | |
|---|---|---|
| ಈ | ಪೆರಿಫೆರಲ್-2 ರಸ್ತೆ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿ ಮತ್ತು ಯಾವಾಗ ಪ್ರಾರಂಭ ಮಾಡಲಾಗುವುದು; ಎಷ್ಟು ಗ್ರಾಮಗಳಲ್ಲಿ ಈ ರಸ್ತೆ ಹಾದು ಹೋಗುತ್ತದೆ? (ಸಂಪೂರ್ಣ ವಿವರ ನೀಡುವುದು) | • ಪೆರಿಫೆರಲ್ ರಿಂಗ್ ರಸ್ತೆ-2 ಯೋಜನೆಯ ಭಾಗವಾದ ಮೈಸೂರು ರಸ್ತೆ-ಮಾಗಡಿ ರಸ್ತೆ ಸಂಪರ್ಕಿಸುವ ರಸ್ತೆ ಕಾಮಗಾರಿ (10.77 ಕಿ.ಮೀ ಉದ್ದ)ಗಾಗಿ 321 ಎಕರೆ 10 ಗುಂಟೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳಲು ದಿನಾಂಕ:27.07.2011 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ತತ್ಸಂಬಂಧ ದಿನಾಂಕ:19.03.2018 ರಿಂದ ಪ್ರಾರಂಭಿಸಲಾಗಿರುವ ಕಾಮಗಾರಿಯು ಬಹುತೇಕ ಮುಕ್ತಾಯ ಹಂತದಲ್ಲಿರುತ್ತದೆ.<br><br>• ಹೊಸೂರು ರಸ್ತೆ-ಬನ್ನೇರುಘಟ್ಟ ರಸ್ತೆ-ಕನಕಪುರ ರಸ್ತೆ-ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆ-ತುಮಕೂರು ರಸ್ತೆ ನಡುವಿನ ಪ್ರದೇಶಗಳಲ್ಲಿ ಅವಶ್ಯವಿರುವ ಭೂ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಲು ಪೂರಕವಾಗಿ ಡಿ.ಪಿ.ಆರ್. ಸಿದ್ಧಪಡಿಸುವ ಪ್ರಕ್ರಿಯೆ ಹಾಲಿ ಚಾಲ್ತಿಯಲ್ಲಿದ್ದು, ಎಲ್ಲಾ ಅಗತ್ಯ ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತಿದೆ. ಡಿ.ಪಿ.ಆರ್. ಪ್ರಕ್ರಿಯೆ ಹಾಗೂ ಭೂಸ್ವಾಧೀನದ ಅಂತಿಮ ಅಧಿಸೂಚನೆಯು ಅಂತಿಮಗೊಂಡ ನಂತರ, ಪ್ರಸ್ತಾಪಿತ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.<br><br>• ಪೆರಿಫೆರಲ್ ರಿಂಗ್ ರಸ್ತೆ ಭಾಗ-2ರ ರಸ್ತೆಯು ಹಾದು ಹೋಗುವ ಗ್ರಾಮಗಳ ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |

**ಸಂಖ್ಯೆ**: ನಅಇ 107 ಬೆಂಭೂಸ್ವಾ 2025

**(ಡಿ.ಕೆ ಶಿವಕುಮಾರ್)**
ಉಪ ಮುಖ್ಯಮಂತ್ರಿ

ಅನುಬಂಧ

| ಪೆರಿಫೆರಲ್ ರಿಂಗ್ ರಸ್ತೆ-2, ಹೊಸೂರು ರಸ್ತೆಯಿಂದ - ಬನ್ನೇರುಘಟ್ಟ ರಸ್ತೆ- ಕನಕಪುರ ರಸ್ತೆ- ಮೈಸೂರು ರಸ್ತೆ- ಮಾಗಡಿ ರಸ್ತೆ- ತುಮಕೂರು ರಸ್ತೆವರೆಗೆ ಬರುವ ಗ್ರಾಮಗಳ ಪಟ್ಟಿ | |
|---|---|
| ಕ್ರಮ ಸಂಖ್ಯೆ | ಗ್ರಾಮದ ಹೆಸರು |
| 1 | ವೀರಸಂದ್ರ, |
| 2 | ಹೆಬ್ಬಗೋಡಿ, |
| 3 | ಗೊಲ್ಲಹಳ್ಳಿ, |
| 4 | ಮಾರಗೊಂಡನಹಳ್ಳಿ, |
| 5 | ಹುಲಿಮಂಗಲ, |
| 6 | ಬಿಂಗೀಪುರ, |
| 7 | ಹುಲ್ಲಹಳ್ಳಿ, |
| 8 | ಬಸವನಪುರ, |
| 9 | ಹೊಮ್ಮದೇವನಹಳ್ಳಿ, |
| 10 | ಗೊಟ್ಟಿಗೆರೆ, |
| 11 | ಪಿಳ್ಳಗಾನಹಳಿ, |
| 12 | ಬಿಲವಾರದಹಳ್ಳಿ, |
| 13 | ಕನ್ನನಾಯಕನಹಳ್ಳಿ ಅಗ್ರಹಾರ, |
| 14 | ಬುತ್ತನಹಳ್ಳಿ, |
| 15 | ಗುಳಕಮಲೈ, |
| 16 | ಕಗ್ಗಲೀಪುರ, |
| 17 | ಉತ್ತರಿ, |
| 18 | ಅಗರ, |
| 19 | ಬಿ.ಎಂ.ಕಾವಲ್, |
| 20 | ಗಂಗಸಂದ್ರ, |
| 21 | ದೇವಗೆರೆ, |

| | |
|---|---|
| 22 | ಗುಡಿಮಾವು, |
| 23 | ಕಂಬೀಪುರ, |
| 24 | ಚಲ್ಲಘಟ್ಟ, |
| 25 | ಕೊಮ್ಮಘಟ್ಟ–ಕೃಷ್ಣಸಾಗರ, |
| 26 | ಭೀಮನಕುಪ್ಪೆ, |
| 27 | ಕೊಮ್ಮಘಟ್ಟ, |
| 28 | ಸೂಲಿಕೆರೆ, |
| 29 | ಕೆಂಚನಪುರ, |
| 30 | ಕನ್ನಲ್ಲಿ, |
| 31 | ಸೀಗೆಹಳ್ಳಿ, |
| 32 | ಕೊಡಿಗೇಹಳ್ಳಿ, |
| 33 | ಮಾಚೋಹಳ್ಳಿ, |
| 34 | ವಡ್ಡರಹಳ್ಳಿ, |
| 35 | ಲಕ್ಷ್ಮೀಪುರ, |
| 36 | ಕದರೇನಹಳ್ಳಿ, |
| 37 | ಹಾರೋಕ್ಯಾತನಹಳ್ಳಿ, |
| 38 | ದೊಂಬರಹಳ್ಳಿ, |
| 39 | ಸಿದ್ದನಹೊಸಹಳ್ಳಿ, |
| 40 | ಮಾದನಾಯಕನಹಳ್ಳಿ, |

12/3

ಕಾರ್ಯಪಾಲಕ ಅಭಿಯಂತರ
[illegible] ಕೊಡಿಗೇಹಳ್ಳಿ [illegible]
ವಿಭಾಗ, ಬೆ.ವಿ.ಕಂ.